# ಕರ್ನಾಟಕ ಸರ್ಕಾರ

ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ
ತಿಪಟೂರ್ ತಾಲ್ಲೂಕು,
ತುಮಕೂರು.
ದಿ :

## ನೋಂದಣಿ ಪ್ರಮಾಣ ಪತ್ರ

ನಮೂನೆ - 2 (ನಿಯಮ 3 ರ ಉಪ ನಿಯಮ 5 (ಬಿ) )

ಪ್ರಮಾಣ ಪತ್ರ ಸಂಖ್ಯೆ : 01

........................................................................................................

ಇದರ ಗೌರ್ನಿನಿಂಗ್ ಕೌನ್ಸಿಲ್‌ಗೆ ಕರ್ನಾಟಕ ಶಿಕ್ಷಣ ಕಾಯ್ದೆ 1983 ( ಕರ್ನಾಟಕ ಆ್ಯಕ್ಟ್ 1 ಆಫ್ 1995 ) ಸೆಕ್ಷನ್ 31 ರಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ
ಈ ಕೆಳಗೆ ನಮೂದಿಸಿರುವ ಶಿಕ್ಷಣ ಸಂಸ್ಥೆಯನ್ನು ನಡೆಸಲು ನೊಂದಾಯಿಸಲಾಗಿದೆಯೆಂದು ಪ್ರಮಾಣೀಕರಿಸಲಾಗಿದೆ.

1. ಕ್ರಮ ಸಂಖ್ಯೆ : 01
2. ಶಾಲೆಯ ಹೆಸರು ಮತ್ತು ಪೂರ್ಣ ವಿಳಾಸ : ದೀಕ್ಷಾ ಹೆರಿಟೇಜ್ ಸ್ಕೂಲ್ ಪ್ರಾಥಮಿಕ ಶಾಲೆ. ವಿದ್ಯಾನಗರ. ತಿಪಟೂರು.
3. ಅನುಮತಿ ನೀಡಿದ ತರಗತಿಗಳು : ಎಲ್.ಕೆ.ಜಿ. ಯು.ಕೆ.ಜಿ.
4. ಪ್ರಾರಂಭಿಸಬೇಕಾದ ಶೈಕ್ಷಣಿಕ ವರ್ಷ : 2012-13.
5. ಅನುಮತಿ ನೀಡಿದ ಮಾಧ್ಯಮ : ಕನ್ನಡ & ಆಂಗ್ಲ.
6. ಶುಲ್ಕ ಪಾವತಿ ಮಾಡಿರುವುದು : 2000/-

ಸದರಿ ಶಿಕ್ಷಣ ಸಂಸ್ಥೆಯನ್ನು ಕ್ರಮಸಂಖ್ಯೆ [redacted]...... ಪುಟ ಸಂಖ್ಯೆ ......22...... ವಾಲ್ಯೂಂ ಸಂಖ್ಯೆ ......01...... ರಲ್ಲಿ ಈ ಕಛೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ ನೋಂದಣಿ ವಹಿಯಲ್ಲಿ ನೊಂದಾಯಿಸಲಾಗಿದೆ.

### ಈ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನೀಡಲಾಗಿದೆ

1. ಈ ನೊಂದಾವಣೆಯು ನಿಯಮ 3ರ (4) ಮತ್ತು (5) ಕ್ಕೆ ಒಳಪಟ್ಟಿರುತ್ತದೆ.
2. ಗೌರ್ನಿನಿಂಗ್ ಕೌನ್ಸಿಲ್‌ರವರು ನಿಯಮ 4 (4) ರಲ್ಲಿ ತಿಳಿಸಿರುವ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

3. ಶಾಲಾ ನಿವೇಶನ, ವಿಸ್ತೀರ್ಣ, ಕಟ್ಟಡ, ಪಾಠೋಪಕರಣಗಳು, ಪೀಠೋಪಕರಣಗಳು, ಸಿಬ್ಬಂದಿ ವರ್ಗ ಆರ್ಥಿಕ ಅನುಕೂಲತೆಗಳು ಮುಂತಾದವುಗಳನ್ನು ಒದಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

4. ಸದರಿ ಶಿಕ್ಷಣ ಸಂಸ್ಥೆಯು ಯಾವುದೇ ಸಂದರ್ಭದಲ್ಲಿಯೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.

5. ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ಮಾತ್ರ ತೆರೆಯತಕ್ಕದ್ದು ಹಾಗು ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.

6. ಯಾವ ಆಡಳಿತ ಮಂಡಳಿಗೆ ಶಾಲೆಯನ್ನು ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಮಂಡಳಿಯು ಅದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿ ಶಾಲೆಯನ್ನು ನಡೆಸತಕ್ಕದ್ದು ಮತ್ತು ಯಾವುದೇ ಕಾರಣಕ್ಕೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹಸ್ತಾಂತರಕ್ಕೆ ಅವಕಾಶವಿರುವುದಿಲ್ಲ.

7. ಸರ್ಕಾರಿ ಆದೇಶ ಸಂಖ್ಯೆ ಇಡಿ 28 ಪಿಜಿಸಿ 94 ದಿನಾಂಕ 29-4-94 ರಂತೆ 1 ರಿಂದ 4ನೇ ತರಗತಿಯವರೆಗೆ ಕನ್ನಡ ಅಥವಾ ಮಕ್ಕಳ ಮಾತೃಭಾಷಾ ಮಾಧ್ಯಮದಲ್ಲಿ ನಡೆಸಿ ಭಾಷಾ ನೀತಿಯನ್ನು ಪಾಲಿಸತಕ್ಕದ್ದು.

8. ಪ್ರತಿ ವರ್ಷವೂ ವಿದ್ಯಾರ್ಥಿಗಳ ವೈದ್ಯಕೀಯ ಪರೀಕ್ಷೆಯನ್ನು ನಿಯಮಾನುಸಾರ ಮಾಡಿಸತಕ್ಕದ್ದು.

9. ಕರ್ನಾಟಕ ಸಮಗ್ರ ಶಿಕ್ಷಣ ಮಸೂದೆ, 1983 (ಕರ್ನಾಟಕ ಆಕ್ಟ್ 1 ಆಫ್ 1995) ಇದರಡಿಯಲ್ಲಿ ಬರುವ ಕಾಯ್ದೆಗಳನ್ನು ಹಾಗೂ ರಚಿಸಲಾದ ಮತ್ತು ಆಗಿಂದಾಗ್ಗೆ ರಚಿಸಲಾಗುವ ನಿಯಮಗಳ ಸಂಬಂಧದಡಿಯಲ್ಲಿ ಮತ್ತು ಪ್ರಾಧಿಕಾರ ನೀಡುವ ಎಲ್ಲಾ ಷರತ್ತುಗಳನ್ನು ಹಾಗೂ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.

10. ಶಿಕ್ಷಣ ಸಂಸ್ಥೆಯವರು ನಡೆಸುತ್ತಿರುವ ಶಾಲೆಗಳಿಗೆ ಸಂಬಂಧಿಸಿದಂತೆ ನೊಂದಣಿಯಾಗಿರುವ ಶಾಲೆಗಳೆಲ್ಲವೂ ಸರ್ಕಾರಿ ಅಧಿಸೂಚನೆ ಸಂಖ್ಯೆ ; ಇಡಿ 175 ಪಿಎಂ.ಸಿ. 95, ದಿನಾಂಕ 7-9-98 ಮತ್ತು ಇಡಿ 175 ಪಿಎಂಸಿ 97, ದಿನಾಂಕ 29-12-1998 ರಂತೆ ಶಾಶ್ವತ ಅನುದಾನ ರಹಿತ ಶಾಲೆಗಳೆಂಬುದಾಗಿ ಪರಿಗಣಿಸಿದೆ.

11. ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳು (ಶಿಸ್ತು ಮತ್ತು ನಿಯಂತ್ರಣ) ನಿಯಮ 1978 ರ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.

12. ಶಾಲೆಯು ಪ್ರಾರಂಭಿಸಿದ 2 ತಿಂಗಳ ಅವಧಿಯೊಳಗೆ ಪ್ರಥಮ ಮಾನ್ಯತೆಗೆ ಸಂಬಂಧಿಸಿದಂತೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

13. ಅನುಮತಿ ನೀಡಿದ ಪ್ರತಿಯೊಂದು ತರಗತಿಯಲ್ಲಿ ಮಕ್ಕಳ ಹಾಗೂ ಶಿಕ್ಷಕರ ಅನುಪಾತವನ್ನು ನಿಯಮಾನುಸಾರ ಪಾಲಿಸತಕ್ಕದ್ದು.

14. ತರಬೇತಿ ಹೊಂದಿದ ಹಾಗೂ ಇಲಾಖಾ ನಿಯಮಗಳ ಪ್ರಕಾರ ವಿದ್ಯಾರ್ಹತೆ ಹೊಂದಿರುವ ಶಿಕ್ಷಕರನ್ನು ಮಾತ್ರ ನೇಮಕ ಮಾಡಿಕೊಳ್ಳತಕ್ಕದ್ದು.

15. ಕರ್ನಾಟಕ ಶಿಕ್ಷಣ ಮಸೂದೆಯ ಅನುಚ್ಛೇದ 6 ರ ಅಡಿಯಲ್ಲಿ ಉಪಬಂಧ 36 ರಿಂದ 39 ರಂತೆ ನೊಂದಣಿ ಮಾಡಿದ ಎಲ್ಲಾ ಶಾಲೆಗಳು 'ರೆಕಗ್ನಿಷನ್' ಹಾಗೂ 'ಪ್ರಾವಿಷನಲ್ ರೆಕಗ್ನಿಷನ್' ವ್ಯಾಪ್ತಿಗೆ ಬರುವುದು.

16. ಶಾಲೆಯನ್ನು ಪ್ರಾರಂಭಿಸಲು ಸಂಸ್ಥೆಯವರು ಭದ್ರತಾ ಠೇವಣಿಯನ್ನು ಜಿಲ್ಲಾ ಉಪ ನಿರ್ದೇಶಕ ಹಾಗೂ ಆಡಳಿತ ಮಂಡಳಿಯ ಕಾರ್ಯದರ್ಶಿಗಳ ಜಂಟಿ ಖಾತೆಯಲ್ಲಿ ಇಡತಕ್ಕದ್ದು.

17. ಕರ್ನಾಟಕ ಶಿಕ್ಷಣ ಮಸೂದೆ, 1983 ರ ನಿಯಮಗಳ ಪ್ರಕಾರ ಶಾಲೆಗೆ ಬೇಕಾದ ಪಾಠೋಪಕರಣ, ಪೀಠೋಪಕರಣ, ಗ್ರಂಥಾಲಯದ ಪುಸ್ತಕಗಳು, ಆಟದ ಮೈದಾನ, ಶಾಲಾ ಕಟ್ಟಡ ಮುಂತಾದ ಅಗತ್ಯ ಸೌಲಭ್ಯಗಳನ್ನು ಒಂದು ವರ್ಷದೊಳಗೆ ಒದಗಿಸತಕ್ಕದ್ದು. ಇಲ್ಲದಿದ್ದಲ್ಲಿ ನೊಂದಣಿಯನ್ನು ರದ್ದುಗೊಳಿಸಲಾಗುವುದು.

18. ಶಾಲೆ ತೆರೆದ ಬಗ್ಗೆ ಹಾಗೂ ವಿದ್ಯಾರ್ಥಿಗಳ ದಾಖಲಾತಿಯನ್ನು ಶಾಲೆ ನೊಂದಣಿಯಾದ ಅಥವಾ ಶೈಕ್ಷಣಿಕ ವರ್ಷ ಪ್ರಾರಂಭವಾದ 2 ತಿಂಗಳೊಳಗಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ತಪ್ಪದೇ ತಿಳಿಸತಕ್ಕದ್ದು, ಒಂದು ವೇಳೆ ಶಾಲೆ ತೆರೆಯದಿದ್ದಲ್ಲಿ ಹಾಗೂ ಯಾವುದೇ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಈ ಆದೇಶ ರದ್ದಾಗುತ್ತದೆ.

ದಿನಾಂಕ : 7/08/11 o/c

ಸ್ಥಳ :

ಕ್ಷೇತ್ರ ಶಿಕ್ಷಣಾಧಿಕಾರಿ

ಕ್ಷೇತ್ರ ಶಿಕ್ಷಣಾಧಿಕಾರಿಗಳು

ಜಿಲ್ಲಾ ಪಂಚಾಯತ್, ತುಮಕೂರು. ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ತುಮಕೂರು (ದ) ಜಿಲ್ಲೆ
ದೂರವಾಣಿ ಸಂಖ್ಯೆ : 0816-2278444 E-mail ID : ddpitumkur@yahoo.com

ಸಂಖ್ಯೆ : ಆನು1/ಶಾಲಾ ನೋಂದಣಿ/16/2012-13 ದಿನಾಂಕ : 18-06-2012

ನಮೂನೆ-2

(ನಿಯಮ-3, ಉಪನಿಯಮ-5(ಬಿ)

**ಶಾಲಾ ನೋಂದಣಿ ಪ್ರಮಾಣ ಪತ್ರ ಸಂಖ್ಯೆ : 07/2012-13**

**ಶ್ರೀ. ವಿದ್ಯಾಶಂಕರ ಎಜುಕೇಷನಲ್ ಅಂಡ್ ಛಾರಿಟಬಲ್ ಟ್ರಸ್ಟ್ (ರಿ.) ನಂ.324, ಶ್ರೀರಂಗ ನಿಲಯ, 10ನೇ ಮುಖ್ಯ ರಸ್ತೆ, 4ನೇ ಬ್ಲಾಕ್, ನಂದಿನಿ ಬಡಾವಣೆ, ಬೆಂಗಳೂರು-560096** ಇದರ ಗೌರ್‍ನಿಂಗ್ ಕೌನ್ಸಿಲ್‌ಗೆ ಕರ್ನಾಟಕ ಶಿಕ್ಷಣ ಕಾಯಿದೆ-1983 (ಕರ್ನಾಟಕ ಆಕ್ಟ್ 1995) ಸೆಕ್ಷನ್ 31ರಂತೆ ಹಾಗೂ ಸರ್ಕಾರದ ಆದೇಶ ಸಂಖ್ಯೆ ಇಡಿ-44/ ಪಿ.ಜಿ.ಸಿ.-202, ದಿನಾಂಕ 11-06-2002ರ ಪ್ರಕಾರ ಈ ದಿನಾಂಕ **18-06-2012** ರಂದು ಈ ಕೆಳಗೆ ನಮೂದಿಸಿರುವ ಶಿಕ್ಷಣ ಸಂಸ್ಥೆಯನ್ನು ಕ್ರಮಸಂಖ್ಯೆ **07/2012-13**, ಪುಟಸಂಖ್ಯೆ **(47)** ವಾಲ್ಯೂಂ ಸಂಖ್ಯೆ (1)ರಲ್ಲಿ ಈ ಕಛೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ ನೋಂದಣಿ ವಹಿಯಲ್ಲಿ ನೋಂದಾಯಿಸಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ.

| | | |
|---|---|---|
| 1 | **ಕ್ರಮಸಂಖ್ಯೆ** | 07/2012-13 |
| 2 | **ಶಾಲೆಯ ಹೆಸರು ಮತ್ತು ವಿಳಾಸ** | ದೀಕ್ಷಾ ಹೆರಿಟೇಜ್ ಕನ್ನಡ ಕಿರಿಯ ಪ್ರಾಥಮಿಕ ಶಾಲೆ, ವಿದ್ಯಾನಗರ, ತಿಪಟೂರು, ತುಮಕೂರು ಜಿಲ್ಲೆ |
| 3 | **ಅನುಮತಿ ನೀಡಿದ ತರಗತಿ** | 1 ರಿಂದ 5ನೇ ತರಗತಿ – ಕನ್ನಡ ಮಾಧ್ಯಮ- ಶಾಶ್ವತ ಅನುದಾನ ರಹಿತ |
| 4 | **ಪ್ರಾರಂಭಿಸಬೇಕಾದ ಶೈಕ್ಷಣಿಕ ವರ್ಷ** | 2012-13ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಬೇಕು. |
| 5 | **ಅನುಮತಿ ನೀಡಿದ ಮಾಧ್ಯಮ** | ಕನ್ನಡ ಮಾಧ್ಯಮ ಶಾಶ್ವತ ಅನುದಾನ ರಹಿತವಾಗಿ. |
| 6 | **ಶುಲ್ಕ ಪಾವತಿ ಮಾಡಿರುವುದು** | ರೂ. 5000-00 ಡಿಡಿ ಸಂ.738526 ದಿನಾಂಕ 26-10-2011 |

ಈ ನೋಂದಣಿ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ನೀಡಲಾಗಿದೆ. ಇದರಲ್ಲಿ ಯಾವುದೇ ಷರತ್ತನ್ನು ಉಲ್ಲಂಘಿಸಿದಲ್ಲಿ ಮೇಲ್ಕಂಡ (ನೋಂದಣಿ) ಅನುಮತಿಯನ್ನು ರದ್ದುಪಡಿಸುವ ಅಧಿಕಾರವನ್ನು ಇಲಾಖೆಯು ಕಾಯ್ದಿರಿಸಿಕೊಂಡಿದೆ.

1) ಸರ್ಕಾರಿ ಸುತ್ತೋಲೆ ಸಂಖ್ಯೆ ಇಡಿ-266-ಎಸ್.ಇ.ಎಸ್.-2012-ಬೆಂಗಳೂರು, ದಿನಾಂಕ 02-06-2012ರ ಸೂಚನೆ ಮೇರೆಗೆ ಈ ಶಾಲಾ ನೋಂದಣಿಯನ್ನು ನೀಡಲಾಗಿದೆ.
2) ಈ ನೋಂದಣಿಯು ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಖಾಸಗಿ ಶಿಕ್ಷಣ ಸಂಸ್ಥೆಗಳ ನಿಯಂತ್ರಣ, ವರ್ಗೀಕರಣ) ನಿಯಮ 1997, ನಿಯಮ-3 (5)(ಡಿ)ನಲ್ಲಿ ಸೂಚಿಸಿರುವ ಅಂಶಗಳಿಗೆ ಒಳಪಟ್ಟಿರುತ್ತದೆ.
3) ಕರ್ನಾಟಕ ಶಿಕ್ಷಣ ಸಂಸ್ಥೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯವಸ್ತು ನಿಗದೀಕರಣ ಇತ್ಯಾದಿ) ನಿಯಮಾವಳಿಗಳು 1995ರ ನಿಯಮ 4, 5, 6 ಮತ್ತು 8ರನ್ವಯ ಸುರಕ್ಷತಾ ಕ್ರಮವಾಗಿ ಶಾಲಾ ಕಟ್ಟಡವು ಕಡ್ಡಾಯವಾಗಿ ಉತ್ತಮ ಗುಣಮಟ್ಟದ ಮೇಲ್ಛಾವಣಿಯನ್ನು ಹೊಂದಿದ್ದು, ಉತ್ತಮ ಗಾಳಿ, ಬೆಳಕಿಗೆ ಅವಕಾಶವಿರಬೇಕು. ಗಂಡು ಮತ್ತು ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯಗಳನ್ನು ಒದಗಿಸಬೇಕು. ಶುದ್ಧವಾದ ಕುಡಿಯುವ ನೀರನ್ನು ಒದಗಿಸಬೇಕು. ಶಾಲಾ ಆವರಣದಲ್ಲಿರುವ ಅಪಾಯಕಾರಿ ಸ್ಥಳಗಳಿಗೆ ಬೇಲಿ ಹಾಕಿ ಶಾಲಾ ಆವರಣಕ್ಕೆ ಮಕ್ಕಳ ಸುರಕ್ಷತೆಗಾಗಿ ಕಾಂಪೌಂಡನ್ನು ಕಡ್ಡಾಯವಾಗಿ ನಿರ್ಮಿಸತಕ್ಕದ್ದು ಮತ್ತು ಬೆಂಕಿ ಆಕಸ್ಮಿಕಗಳನ್ನು ತಪ್ಪಿಸಲು ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳಬೇಕು ಹಾಗೂ ಕಡ್ಡಾಯವಾಗಿ ಶಾಲೆಯಲ್ಲಿ ಅಗ್ನಿನಂದಕಗಳನ್ನು ಅಳವಡಿಸಿರಬೇಕು ಮತ್ತು ಶಾಲಾ ಮಕ್ಕಳ ಸುರಕ್ಷತೆಯ ಬಗ್ಗೆ ಹೆಚ್ಚಿನ ಆದ್ಯತೆ ನೀಡಬೇಕು.
4) ಶಿಕ್ಷಣ ಸಂಸ್ಥೆಯು ಯಾವುದೇ ಸಂದರ್ಭದಲ್ಲಿಯೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.
5) ಕರ್ನಾಟಕ ಶಿಕ್ಷಣ ಕಾಯಿದೆ-41(5)ರಂತೆ ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ಮಾತ್ರ ತೆರೆಯತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.
6) ಯಾವ ಆಡಳಿತ ಮಂಡಳಿಗೆ ಶಾಲೆ ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಆಡಳಿತ ಮಂಡಳಿಯು ಅದೇ ಸ್ಥಳದಲ್ಲಿ ಮತ್ತು ಅದೇ ಹೆಸರಿನಲ್ಲಿ ನಡೆಸತಕ್ಕದ್ದು ಮತ್ತು ಯಾವುದೇ ಕಾರಣಕ್ಕೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹಸ್ತಾಂತರಿಸತಕ್ಕದ್ದಲ್ಲ.
7) ಈ ಶಿಕ್ಷಣ ಸಂಸ್ಥಯವರು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಹಾಗೂ ಆಗಿಂದಾಗ್ಗೆ ಹೊರಡಿಸುವ ಎಲ್ಲಾ ಸರ್ಕಾರಿ ಆದೇಶಗಳು ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು. ಕರ್ನಾಟಕ ಶಿಕ್ಷಣ ಮಸೂದೆ 1983 (ಕರ್ನಾಟಕ ಆಕ್ಟ್ ಸಂಖ್ಯೆ 1995) ಇದರಡಿಯಲ್ಲಿ ಬರುವ ಕಾಯ್ದೆಗಳನ್ನು ಮತ್ತು ಅದರಲ್ಲಿ ರಚಿಸಲಾಗಿರುವ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.
8) ಈ ಪ್ರಾಥಮಿಕ ಶಾಲಾ ನೋಂದಾವಣೆಯು ಸರ್ಕಾರಿ ಅಧಿಸೂಚನೆ ಇಡಿ-175/ಪಿಎಂಸಿ./95, ದಿನಾಂಕ 07-09-1998 ಮತ್ತು ದಿನಾಂಕ 29-12-1998ರ ಪ್ರಕಾರ ಶಾಶ್ವತ ಅನುದಾನರಹಿತವಾಗಿರುತ್ತದೆ. (Permanently without Aid)
9) ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ (ಶಿಸ್ತು ಮತ್ತು ನಿಯಂತ್ರಣ) ನಿಯಮ 1999ರ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು ಹಾಗೂ ಅವುಗಳಿಗೆ ಬದ್ಧರಾಗಿರತಕ್ಕದ್ದು.
10) ಕರ್ನಾಟಕ ಶಿಕ್ಷಣ ಸಂಸ್ಥೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯವಸ್ತು ನಿಗದೀಕರಣ ಇತ್ಯಾದಿ) ನಿಯಮಾವಳಿಗಳು 1995ರನ್ವಯ ಇಲಾಖೆ ಮತ್ತು ಸರ್ಕಾರ ನಿಗದಿಪಡಿಸಿದ ಪಠ್ಯಪುಸ್ತಕಗಳನ್ನು ಮಾತ್ರ ಬೋಧಿಸತಕ್ಕದ್ದು ಹಾಗೂ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಕೊರೆಯಾಗದಂತೆ ಕ್ರಮವಹಿಸುವುದು.

**ಪು.ತಿ.ನೋ.**

11) ನಿಯಮ-10(4)ರಂತೆ ಶಾಲೆಯಲ್ಲಿ ವಿದ್ಯಾರ್ಥಿ/ಪೋಷಕರಿಂದ ವಸೂಲಿ ಮಾಡುವ ಶುಲ್ಕಗಳ ವಿವರಗಳ ಒಂದು ಬ್ರೋಚರನ್ನು ಶಾಲೆಯ ಸೂಚನಾ ಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸಿ, ಅದರ ಒಂದು ಪ್ರತಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು.

12) ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ-39-ವಿವಿಧ-99, ದಿನಾಂಕ 14-03-2000ರ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ರೆಗ್ಯುಲೇಷನ್ ಆಫ್ ಸರ್ಟನ್ ಫೀಸ್ ಅಂಡ್ ಡೊನೇಷನ್ಸ್) ನಿಯಮ 1999ರ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು ಹಾಗೂ ಈ ನಿಯಮದಂತೆ ಯಾವುದೇ ವಂತಿಕೆಯನ್ನು ವಸೂಲು ಮಾಡುವಂತಿಲ್ಲ.

13) ಅನುಮತಿ ಪಡೆದ 2 ತಿಂಗಳೊಳಗಾಗಿ ಕರ್ನಾಟಕ ಶಿಕ್ಷಣ ಕಾಯಿದೆ 1983 (ಆಕ್ಟ್ 1 ಆಫ್ 1995)ರ ಪ್ರಕಾರ ಸೆಕ್ಷನ್ 36 ರಿಂದ 39ರ ರೀತ್ಯಾ ಹಾಗೂ ಇಡಿ-131-ವಿವಿಧ/98/ಬೆಂಗಳೂರು, ದಿನಾಂಕ 04-11-1999ರಂತೆ ಮಾನ್ಯತೆ ನವೀಕರಣ ಹೊಂದಲು ಸರ್ಕಾರಿ ಅಧಿಸೂಚನೆ ಸಂಖ್ಯೆ ಇಡಿ-137-ವಿವಿಧ/98/ಬೆಂಗಳೂರು ದಿನಾಂಕ 19-05-1999ರ ಪ್ರಕಾರ ಸಕ್ಷಮ ಪ್ರಾಧಿಕಾರಿಗಳಿಗೆ ಅರ್ಜಿ ಸಲ್ಲಿಸತಕ್ಕದ್ದು ಹಾಗೂ ಶಾಲೆಯನ್ನು ಪ್ರಾರಂಭಿಸಲು ಸಂಸ್ಥೆಯವರು ನಿಗದಿತ ಭದ್ರತಾ ಠೇವಣಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಆಡಳಿತ ಮಂಡಳಿಯ ಕಾರ್ಯದರ್ಶಿಗಳ ಜಂಟಿ ಖಾತೆಯಲ್ಲಿ ಇಡತಕ್ಕದ್ದು.

14) ಸರ್ಕಾರಿ ಆದೇಶ ಸಂಖ್ಯೆ ಇಡಿ-28-ಪಿ.ಜಿ.ಸಿ.-94, ದಿನಾಂಕ 29-04-1994ರಂತೆ, 1 ರಿಂದ 5ನೇ ತರಗತಿಯವರೆಗೆ ಕನ್ನಡ ಅಥವಾ ಮಕ್ಕಳ ಮಾತೃಭಾಷಾ ಮಾಧ್ಯಮದಲ್ಲಿ ನಡೆಸಿ ಭಾಷಾನೀತಿ ಪಾಲಿಸಬೇಕು.

15) ಸಕಾರದ ಅಧಿಸೂಚನೆ ಸಂಖ್ಯೆ ಇಡಿ-52-ವಿವಿಧ-99, ದಿನಾಂಕ 02-02-2000ರ ಅನುಬಂಧ-5ರ ನಿಯಮದಂತೆ ಅನುಮತಿ ನೀಡಿದ ಪ್ರತಿಯೊಂದು ತರಗತಿಯಲ್ಲಿ ಮಕ್ಕಳ ಹಾಗೂ ಶಿಕ್ಷಕರ ಅನುಪಾತವನ್ನು ಪಾಲಿಸತಕ್ಕದ್ದು.

16) ತರಬೇತಿ ಹೊಂದಿದ ಹಾಗೂ ಇಲಾಖೆಯ ನಿಯಮಗಳ ಪ್ರಕಾರ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಮಾತ್ರ ನೇಮಿಸತಕ್ಕದ್ದು.

17) ಕರ್ನಾಟಕ ಶಿಕ್ಷಣ ಮಸೂದೆಯ ನಿಯಮಗಳಂತೆ ಶಾಲೆಗೆ ಬೇಕಾದ ಮೂಲಭೂತ ಸೌಲಭ್ಯಗಳಾದ ಪೀಠೋಪಕರಣ, ಪಾಠೋಪಕರಣ, ಗ್ರಂಥಾಲಯ ಮುಂತಾದ ಸೌಲಭ್ಯಗಳನ್ನು ಒಂದು ವರ್ಷದಲ್ಲಿ ಹಾಗೂ ಸುಸಜ್ಜಿತವಾದ ಆಟದ ಮೈದಾನ, ಶಾಲಾ ಕಟ್ಟಡವನ್ನು ಮೂರು ವರ್ಷದಲ್ಲಿ ಒದಗಿಸಿಕೊಳ್ಳತಕ್ಕದ್ದು.

18) ಶಾಲಾ ಕೆಲಸದ ವೇಳೆ ಮತ್ತು ದಿನಗಳನ್ನು ಇಲಾಖೆಯ ನಿಯಮಗಳಂತೆ ಪಾಲಿಸತಕ್ಕದ್ದು.

19) ಶಾಲೆ ತೆರೆದ ಬಗ್ಗೆ ಹಾಗೂ ವಿದ್ಯಾರ್ಥಿಗಳ ದಾಖಲಾತಿಯನ್ನು ಶಾಲೆ ನೋಂದಣಿಯಾದ ಅಥವಾ ಶೈಕ್ಷಣಿಕ ವರ್ಷ ಪ್ರಾರಂಭವಾದ ಎರಡು ತಿಂಗಳ ಒಳಗಾಗಿ ಈ ಕಛೇರಿಗೆ ತಿಳಿಸಬೇಕು. ಒಂದು ವೇಳೆ ಶಾಲೆ ತೆರೆಯದಿದ್ದಲ್ಲಿ ಹಾಗೂ ಯಾವುದೇ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಈ ಆದೇಶ ತನ್ನಿಂದ ತಾನೇ ರದ್ದಾಗುವುದು.

20) ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ-27-ಎಸ್.ಇ.ಪಿ.03, ದಿನಾಂಕ 13-02-2003ರ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಿ ಶಾಲೆಯಲ್ಲಿ ನೇಮಕಗೊಂಡಿರುವ ಸಿಬ್ಬಂದಿಗಳ ಸೇವಾಪುಸ್ತಕವನ್ನು ತೆರೆದು, ಅದರಲ್ಲಿ ಶಿಕ್ಷಕರ ಸೇವಾ ವಿವರಗಳನ್ನು ನಿಯಮಾನುಸಾರ ದಾಖಲು ಮಾಡಿ ಕಡ್ಡಾಯವಾಗಿ ನಿರ್ವಹಿಸುವುದು ಹಾಗೂ ಬ್ಯಾಂಕ್ ಮೂಲಕವೇ ಹುದ್ದೆಯ ಕನಿಷ್ಠ ವೇತನ ನೀಡುವುದು ಹಾಗೂ ಇವರುಗಳಿಗೆ ಸೇವಾ ಭದ್ರತೆಯನ್ನು ಒದಗಿಸತಕ್ಕದ್ದು.

21) ಶಿಕ್ಷರನ್ನು ಗಣತಿ ಕಾರ್ಯಕ್ಕೆ ತಪ್ಪದೇ ನಿಯೋಜಿಸುವುದು.

22) ಪ್ರತಿ ತರಗತಿಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ 50ಕ್ಕೆ ಮೀರಬಾರದು.

23) 1 ರಿಂದ 5ನೇ ತರಗತಿಯಲ್ಲಿ ಕನ್ನಡ/ಮಾತೃಭಾಷಾ ಪುಸ್ತಕವನ್ನು ಹೊರತುಪಡಿಸಿ, ಆಂಗ್ಲ ಮಾಧ್ಯಮದ ಯಾವುದೇ ಪುಸ್ತಕಗಳನ್ನು ಹೆಚ್ಚುವರಿಯಾಗಿ ತರಗತಿಯಲ್ಲಿ ಬಳಸಬಾರದು. ಭಾಷಾನೀತಿಯನ್ನು ಕಡ್ಡಾಯವಾಗಿ ಪಾಲಿಸುವುದು.

24) ಶಾಲಾ ನೋಂದಣಿಗಾಗಿ ಆಡಳಿತ ಮಂಡಳಿಯವರು ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಯಾವುದೇ ದಾಖಲೆಗಳು ಸುಳ್ಳು ಎಂದು ಕಂಡುಬಂದಲ್ಲಿ ಈ ನೋದಣಿಯನ್ನು ರದ್ದುಪಡಿಸಲಾಗುವುದು.

25) ಅನುಮತಿ ಪಡೆದ ಐದು ವರ್ಷಗಳವರೆಗೆ ಶಾಲಾ ಸ್ಥಳಾಂತರ ಮತ್ತು ಶಾಲಾ ಹಸ್ತಾಂತರ ಮಾಡಬಾರದು.

18/6/12

(ಬಿ. ಮೋಹನ್ ಕುಮಾರ್)
ಉಪನಿರ್ದೇಶಕರು,
ಸಾರ್ವಜನಿಕ ಶಿಕ್ಷಣ ಇಲಾಖೆ,
ತುಮಕೂರು (ದ) ಜಿಲ್ಲೆ

18/6/12

ಗೆ :

1) ಅಧ್ಯಕ್ಷರು/ಛೇರ್ಮನ್, ಶ್ರೀ. ವಿದ್ಯಾಶಂಕರ ಎಜುಕೇಷನಲ್ ಅಂಡ್ ಛಾರಿಟಬಲ್ ಟ್ರಸ್ಟ್ (ರಿ.) ನಂ.324, ಶ್ರೀರಂಗ ನಿಲಯ, 10ನೇ ಮುಖ್ಯ ರಸ್ತೆ, 4ನೇ ಬ್ಲಾಕ್, ನಂದಿನಿ ಬಡಾವಣೆ, ಬೆಂಗಳೂರು-560096.

2) ಕ್ಷೇತ್ರ ಶಿಕ್ಷಣಾಧಿಕಾರಿಗಳು, ತಿಟಪೂರು ಕ್ರ.ಸಂ. (1) ಮತ್ತು (25)ರ ವರೆಗಿನ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಿರುವ ಬಗ್ಗೆ ಶಾಲೆ ಪ್ರಾರಂಭವಾದ ಎರಡು ತಿಂಗಳೊಳಗೆ ತಪ್ಪದೇ ವರದಿ ಸಲ್ಲಿಸುವುದು ಹಾಗೂ ಈ ಬಗ್ಗೆ ಆಗಾಗ್ಗೆ ಭೇಟಿ ನೀಡಿ ಪರಿಶೀಲಿಸುವುದು. ಮಾನ್ಯತೆ ನೀಡುವಾಗ ಪರಿಶೀಲಿಸಿ ಮಾನ್ಯತೆ ನೀಡಲು ತಿಳಿಸಿದೆ.

3) ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು– 560001**

ಸಂಖ್ಯೆ:ಸಿ7[2] ಪ್ರಾಶಿಅ/ಭಾಷಾ ನೀತಿ/186/2016–17 ದಿನಾಂಕ: 11.12.2017

**ನಮೂನೆ–4**

**(ನಿಯಮ 7ರ ಉಪನಿಯಮ 3ರಂತೆ)**

**ಪರಿಷ್ಕರಿಸಲ್ಪಟ್ಟ ನೋಂದಣಿ ಪ್ರಮಾಣ ಪತ್ರ.**

**ಕ್ರಮ ಸಂಖ್ಯೆ: 510/2016–17**

**ಶ್ರೀ ವಿದ್ಯಾಶಂಕರ ಎಜುಕೇಷನಲ್ ಅಂಡ್ ಛಾರಿಟಬಲ್ ಟ್ರಸ್ಟ್** (ರಿ), **ನಂ.324, ಶ್ರೀರಂಗ ನಿಲಯ, 10ನೇ ಮುಖ್ಯರಸ್ತೆ, 4ನೇ ಬ್ಲಾಕ್, ನಂದಿನಿ ಬಡಾವಣೆ, ಬೆಂಗಳೂರು–560096**. (ಆಡಳಿತ ಮಂಡಳಿಯ ಹೆಸರು ಮತ್ತು ವಿಳಾಸವನ್ನು ನಮೂದಿಸುವುದು) ಈ ಸಂಸ್ಥೆಯು ಕೆಳಗಿನ ಶಾಲೆಯನ್ನು ನಡೆಸಲು ನೋಂದಾಯಿಸಲ್ಪಟ್ಟಿದೆ.

| ಕ್ರ. ಸಂ | ಶಾಲೆಯ ಹೆಸರು ಮತ್ತು ವಿಳಾಸ (ಸಂಸ್ಥೆಯ ವರ್ಗ) | ಅನುಮತಿ ನೀಡಿದ ತರಗತಿ | ಪ್ರಾರಂಭಿಸಿದ ವರ್ಷ | ಅನುಮತಿ ನೀಡಿದ ಮಾಧ್ಯಮ | ಪಾವತಿಸಿರುವ ಶುಲ್ಕ |
|---|---|---|---|---|---|
| 1 | ದೀಕ್ಷಾ ಹೆರಿಟೇಜ್ ಕನ್ನಡ ಕಿರಿಯ ಪ್ರಾಥಮಿಕ ಶಾಲೆ, ವಿದ್ಯಾನಗರ, ತಿಪಟೂರು, ತುಮಕೂರು ಜಿಲ್ಲೆ | 1 ರಿಂದ 5ನೇ ತರಗತಿ ಕನ್ನಡ ಮಾಧ್ಯಮ ಶಾಶ್ವತ ಅನುದಾನರಹಿತ | 2012–13 | ಕನ್ನಡ ಮಾಧ್ಯಮ | ರೂ.5000/– |

ಮೇಲಿನ ಆಡಳಿತ ಮಂಡಳಿಯು, ಕರ್ನಾಟಕ ಶಿಕ್ಷಣ ಕಾಯಿದೆ 1983 ರ (1995ರ ಕರ್ನಾಟಕ ಕಾಯಿದೆ–1) ಸೆಕ್ಷನ್–31 ರ ಉಪನಿಯಮ (5) ರಲ್ಲಿನ ಅವಕಾಶಗಳಂತೆ, ಈ ಮೊದಲು ನೋಂದಣಿ ಮಾಡಿದ ಶಾಲೆಯ ವಿವರಗಳಲ್ಲಿ ಬದಲಾವಣೆಗಳಾಗಿರುವುದನ್ನು ವರದಿ ಮಾಡಿ, ಮೂಲ ನೋಂದಣಿ ಪ್ರಮಾಣ ಪತ್ರವನ್ನು ಪರಿಷ್ಕರಿಸುವಂತೆ ಕೋರಿ ನಮೂನೆ–3ರಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತದೆ.

ಪ್ರಯುಕ್ತ, ಈ ಮೊದಲು **ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ತುಮಕೂರು, ತುಮಕೂರು ಜಿಲ್ಲೆ** ಪ್ರಾಧಿಕಾರದಿಂದ ಮೂಲ ನೋಂದಣಿ ಪ್ರಮಾಣ ಪತ್ರ ವಿತರಿಸಲಾಗಿದ್ದು**–07/2012–13** ಕ್ರಮ ಸಂಖ್ಯೆಯ ಹಾಗೂ **18.06.2012** ರ ದಿನಾಂಕದ ನೋಂದಣಿ ಪ್ರಮಾಣ ಪತ್ರವನ್ನು ಹಿಂಪಡೆದಿದೆ ಮತ್ತು ರದ್ದುಪಡಿಸಿದೆ ಹಾಗೂ ಸಂಬಂಧಿತ ವಹಿಯಲ್ಲಿ ಅಗತ್ಯ ನಮೂದುಗಳನ್ನು ಮಾಡುವಂತೆ ಆ ಮೂಲ ನೋಂದಣಿ ಪ್ರಾಧಿಕಾರಿಗೆ ಸೂಚಿಸಿದೆ.

ಹಾಗೂ, ಇದೀಗ ಪರಿಷ್ಕೃತ ನೋಂದಣಿ ಪ್ರಮಾಣ ಪತ್ರವನ್ನು **ಶ್ರೀ ವಿದ್ಯಾಶಂಕರ ಎಜುಕೇಷನಲ್ ಅಂಡ್ ಛಾರಿಟಬಲ್ ಟ್ರಸ್ಟ್** (ರಿ), **ನಂ.324, ಶ್ರೀರಂಗ ನಿಲಯ, 10ನೇ ಮುಖ್ಯರಸ್ತೆ, 4ನೇ ಬ್ಲಾಕ್, ನಂದಿನಿ ಬಡಾವಣೆ, ಬೆಂಗಳೂರು–560096**.ಇವರ ಹೆಸರಿಗೆ (ಆಡಳಿತ ಮಂಡಳಿಯ ಹೆಸರು ಮತ್ತು ವಿಳಾಸವನ್ನು ನಮೂದಿಸುವುದು) ಕೆಳಕಂಡಂತೆ ಪರಿಷ್ಕೃತ ವಿವರಗಳನ್ನು ನಮೂದಿಸಿ ವಿತರಿಸಲಾಗಿದೆ.

| ಕ್ರಮ ಸಂ. | ಶಾಲೆಯ ಹೆಸರು ಮತ್ತು ವಿಳಾಸ ಮತ್ತು ವರ್ಗ | ಬೋಧನ ಮಾಧ್ಯಮ | ಅನುಮತಿ ನೀಡಿದ ತರಗತಿಗಳು | ಶೈಕ್ಷಣಿಕ ಸಾಲು | ಶುಲ್ಕದ ವಿವರ |
|---|---|---|---|---|---|
| 1 | ದೀಕ್ಷಾ ಹೆರಿಟೇಜ್ ಕನ್ನಡ ಕಿರಿಯ ಪ್ರಾಥಮಿಕ ಶಾಲೆ, ವಿದ್ಯಾನಗರ, ತಿಪಟೂರು, ತುಮಕೂರು ಜಿಲ್ಲೆ | ಆಂಗ್ಲ | 1 ರಿಂದ 5ನೇ ತರಗತಿ ಆಂಗ್ಲ ಮಾಧ್ಯಮ ಶಾಶ್ವತ ಅನುದಾನರಹಿತ | 2015–16 | –––– |

D.D.P.I. Office
Zilla Panchayath
Tumkur
Ref. 2H011
Dt. 20/2/18

ಈ ಹಿಂದಿನ ಪ್ಯಾರಾಗಳಲ್ಲಿ ಉಲ್ಲೇಖಿಸಿರುವ ಆಡಳಿತ ಮಂಡಳಿಯ ವಿವರಗಳನ್ನು, ಶಿಕ್ಷಣ ಸಂಸ್ಥೆಗಳ ಪರಿಷ್ಕೃತ ನೋಂದಣಿ ಪ್ರಮಾಣ ಪತ್ರವನ್ನು ವಿತರಿಸಲಾಗಿರುವ ನೋಂದಣಿ ವಹಿಯ 01 ವ್ಯಾಲ್ಯೂಂನ ಪುಟ ಸಂಖ್ಯೆ 252ರ ಕ್ರಮಸಂಖ್ಯೆ: 510 ರಲ್ಲಿ ನೋಂದಾಯಿಸಲಾಗಿದೆ.

ಈ ನೋಂದಣಿ ಪ್ರಮಾಣ ಪತ್ರವನ್ನು ದಿನಾಂಕ: 11.12.2017 ರಂದು ವಿತರಿಸಲಾಗಿದೆ.

**ಮಾನ್ಯ ಆಯುಕ್ತರ ಆದೇಶದ ಮೇರೆಗೆ**

ಸ್ಥಳ: ಬೆಂಗಳೂರು
ದಿನಾಂಕ: 11-12-2017

(ಬಿ.ಕೆ. ಬಸವರಾಜು)
ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)
ಹಾಗೂ ನೋಂದಣಿ ಪ್ರಾಧಿಕಾರಿಗಳ ಪರವಾಗಿ

11/12/17

**ಇವರಿಗೆ,**

1. ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ತುಮಕೂರು ಜಿಲ್ಲೆ, ತುಮಕೂರು.
2. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ.
3. ಕಾರ್ಯದರ್ಶಿಗಳು, **ಶ್ರೀ ವಿದ್ಯಾಶಂಕರ ಎಜುಕೇಷನಲ್ ಅಂಡ್ ಛಾರಿಟಬಲ್ ಟ್ರಸ್ಟ್ (ರಿ), ನಂ.324, ಶ್ರೀರಂಗ ನಿಲಯ, 10ನೇ ಮುಖ್ಯರಸ್ತೆ, 4ನೇ ಬ್ಲಾಕ್, ನಂದಿನಿ ಬಡಾವಣೆ, ಬೆಂಗಳೂರು-560096.**
4. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು- ೫೬೦೦೦೧**

ಸಂಖ್ಯೆ : ಸಿ7(7)ಪ್ರಾಶಿಅ/ಶಾ.ನೋಂ/20/2013-14

ದಿನಾಂಕ: 03-05-2014

ನಮೂನೆ-2

(ನಿಯಮ 3 ಉಪನಿಯಮ 5 (ಬಿ))

ಪ್ರಮಾಣ ಪತ್ರ ಸಂಖ್ಯೆ : 112/2014-15

ಶ್ರೀ ವಿದ್ಯಾಶಂಕರ ಎಜುಕೇಷನಲ್ ಅಂಡ್ ಚಾರಿಟಬಲ್ ಟ್ರಸ್ಟ್(ರಿ) ವಿದ್ಯಾನಗರ, ತಿಪಟೂರು, ತುಮಕೂರು ಜಿಲ್ಲೆ (ನೊಂದಣಿ ನಂ.324, 10ನೇ ಮೈನ್, 4ನೇ ಬ್ಲಾಕ್, ನಂದಿನಿಲೇಔಟ್, ಬೆಂಗಳೂರು-96) ಇವರಿಗೆ ಕರ್ನಾಟಕ ಶಿಕ್ಷಣ ಕಾಯ್ದೆ 1983 (ಕರ್ನಾಟಕ ಆಕ್ಟ್ 1995) ಸೆಕ್ಷನ್ 31 ರನ್ವಯ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಇಡಿ 44 ಪಿ ಜಿ ಸಿ 2002, ದಿನಾಂಕ : 11.06.2002 ರ ಪ್ರಕಾರ ಈ ಕೆಳಗೆ ನಮೂದಿಸಿರುವ ಶಿಕ್ಷಣ ಸಂಸ್ಥೆಯನ್ನು ಕ್ರಮ ಸಂಖ್ಯೆ 112 ಪುಟ ಸಂಖ್ಯೆ: 180 ವಾಲ್ಯೂಂ ಸಂಖ್ಯೆ: 17 ರಲ್ಲಿ ಈ ಕಛೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ ನೋಂದಣಿ ವಹಿಯಲ್ಲಿ ನೋಂದಾಯಿಸಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ.

| | | |
|---|---|---|
| 1. | ಕ್ರಮ ಸಂಖ್ಯೆ | : 112/2014-15 |
| 2. | ಶಾಲೆಯ ಹೆಸರು ಮತ್ತು ವಿಳಾಸ | : ದೀಕ್ಷಾ ಹೆರಿಟೇಜ್ ಆಂಗ್ಲ ಹಿರಿಯ ಪ್ರಾಥಮಿಕ ಶಾಲೆ,ವಿದ್ಯಾನಗರ, ತಿಪಟೂರು ತಾ ತುಮಕೂರು ಜಿಲ್ಲೆ. |
| 3. | ಅನುಮತಿ ನೀಡಿದ ತರಗತಿ | : 6 ರಿಂದ 8 ನೇ ತರಗತಿ (ಶಾಶ್ವತಅನುದಾನರಹಿತವಾಗಿ) |
| 4. | ಪ್ರಾರಂಭಿಸಬೇಕಾದ ಶೈಕ್ಷಣಿಕ ವರ್ಷ | : 2014-15, 2015-16, 2016-17 (Permanently without-aid) |
| 5. | ಅನುಮತಿ ನೀಡಿದ ಮಾಧ್ಯಮ | : ಆಂಗ್ಲ ಮಾಧ್ಯಮ |
| 6. | ಶುಲ್ಕ ಪಾವತಿ ಮಾಡಿರುವುದು | : ರೂ. 10,000/- |

ಈ ನೋಂದಣಿ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ನೀಡಲಾಗಿದೆ. ಇದರಲ್ಲಿ ಯಾವುದೇ ಷರತ್ತನ್ನು ಉಲ್ಲಂಘಿಸಿದಲ್ಲಿ ಮೇಲ್ಕಂಡ (ನೋಂದಣಿ) ಅನುಮತಿಯನ್ನು ರದ್ದುಪಡಿಸುವ ಅಧಿಕಾರವನ್ನು ಇಲಾಖೆಯು ಕಾಯ್ದಿರಿಸಿಕೊಂಡಿದೆ.

1. ಈ ನೋಂದಾವಣೆಯು ಕರ್ನಾಟಕ ಶಿಕ್ಷಣ ಸಂಸ್ಥೆಗಳು(ಖಾಸಗಿ ಶಿಕ್ಷಣ ಸಂಸ್ಥೆಗಳ ನಿಯಂತ್ರಣ,ವರ್ಗೀಕರಣ)ನಿಯಮ-1997 ನಿಯಮ-3(5)(ಬಿ)ನಲ್ಲಿ ಸೂಚಿಸಿರುವ ಅಂಶಗಳಿಗೆ ಒಳಪಟ್ಟಿರುತ್ತದೆ.
2. ಕರ್ನಾಟಕ ಶಿಕ್ಷಣ ಸಂಸ್ಥೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯವಸ್ತು ನಿಗಧೀಕರಣ ಇತ್ಯಾದಿ) ನಿಯಮಾವಳಿಗಳು 1995ರ ನಿಯಮ 4, 5, 6 ಮತ್ತು 8 ರನ್ವಯ ಸುರಕ್ಷತಾ ಕ್ರಮವಾಗಿ, ಶಾಲಾ ಕಟ್ಟಡವು ಕಡ್ಡಾಯವಾಗಿ ಉತ್ತಮ ಗುಣಮಟ್ಟದ ಮೇಲ್ಛಾವಣಿಯನ್ನು ಹೊಂದಿದ್ದು, ಉತ್ತಮ ಗಾಳಿ ಬೆಳಕಿಗೆ ಅವಕಾಶವಿರಬೇಕು. ಗಂಡು ಮತ್ತು ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯಗಳನ್ನು ಒದಗಿಸಬೇಕು. ಕುಡಿಯುವ ನೀರನ್ನು ಒದಗಿಸಿರಬೇಕು. ಶಾಲಾ ಆವರಣದಲ್ಲಿರುವ ಅಪಾಯಕಾರಿ ಸ್ಥಳಗಳಿಗೆ ಬೇಲಿ ಹಾಕಿ, ಶಾಲಾ ಆವರಣಕ್ಕೆ ಮಕ್ಕಳ ಸುರಕ್ಷತೆಗಾಗಿ ಕಾಂಪೌಂಡನ್ನು ಕಡ್ಡಾಯವಾಗಿ ನಿರ್ಮಿಸತಕ್ಕದ್ದು. ಮತ್ತು ಬೆಂಕಿ ಆಕಸ್ಮಿಕಗಳನ್ನು ತಪ್ಪಿಸಲು ಅಗತ್ಯ ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳಬೇಕು.
3. ಶಿಕ್ಷಣ ಸಂಸ್ಥೆಯು ಯಾವುದೇ ಸಂದರ್ಭದಲ್ಲಿಯೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.
4. ಕರ್ನಾಟಕ ಶಿಕ್ಷಣ ಕಾಯ್ದೆ ಸೆಕ್ಷನ್-41(5) ರಂತೆ ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ಮಾತ್ರ ತೆರೆಯತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.
5. ಯಾವ ಆಡಳಿತ ಮಂಡಳಿಗೆ ಶಾಲೆ ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಮಂಡಳಿಯು ಅದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿ ನಡೆಸತಕ್ಕದ್ದು ಮತ್ತು ಯಾವುದೇ ಕಾರಣಕ್ಕೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹಸ್ತಾಂತರಿಸತಕ್ಕದ್ದಲ್ಲ.
6. ಈ ಶಿಕ್ಷಣ ಸಂಸ್ಥೆಯವರು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಹಾಗೂ ಈಗಿಂದಾಗ್ಗೆ ಹೊರಡಿಸಿದ ಎಲ್ಲಾ ಸರ್ಕಾರಿ ಆದೇಶಗಳು ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು. ಕರ್ನಾಟಕ ಶಿಕ್ಷಣ ಮಸೂದೆ 1983 (ಕರ್ನಾಟಕ ಆಕ್ಟ್ ಸಂಖ್ಯೆ:1:95) ಇದರಡಿಯಲ್ಲಿ ಬರುವ ಕಾಯ್ದೆಗಳನ್ನು ಮತ್ತು ಅದರಲ್ಲಿ ರಚಿಸಲಾಗಿರುವ ನಿಯಮಗಳನ್ನು ತಪ್ಪದೆ ಪಾಲಿಸತಕ್ಕದ್ದು.
7. ಈ ಪ್ರಾಥಮಿಕ ಶಾಲಾ ನೋಂದಾವಣೆಯು ಸರ್ಕಾರಿ ಅಧಿಸೂಚನೆ ಸಂಖ್ಯೆ: ಇಡಿ 175 ಪಿ.ಎಂ.ಸಿ 95, ದಿನಾಂಕ : 07-09-98 ಮತ್ತು ದಿನಾಂಕ : 29-12-98 ರ ಪ್ರಕಾರ ಶಾಶ್ವತ ಅನುದಾನರಹಿತವಾಗಿರುತ್ತದೆ. (Permanently without-aid)
8. ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ (ಶಿಸ್ತು ಮತ್ತು ನಿಯಂತ್ರಣ) ನಿಯಮ 1999ರ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು/ ಅವುಗಳಿಗೆ ಬದ್ಧವಾಗಿರತಕ್ಕದ್ದು.
9. ಕರ್ನಾಟಕ ಶಿಕ್ಷಣ ಸಂಸ್ಥೆಗಳ(ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯ ವಸ್ತು ನಿಗಧೀಕರಣ ಇತ್ಯಾದಿ) ನಿಯಮಾವಳಿ 1995ರನ್ವಯ ಇಲಾಖೆ ಮತ್ತು ಸರ್ಕಾರ ನಿಗಧಿಪಡಿಸಿದ ಪಠ್ಯಪುಸ್ತಕಗಳನ್ನು ಮಾತ್ರ ಬೋಧಿಸತಕ್ಕದ್ದು ಹಾಗೂ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ದೊರೆಯುವಂತೆ ಕ್ರಮವಹಿಸುವುದು.
10. ಕರ್ನಾಟಕ ಶಿಕ್ಷಣ ಸಂಸ್ಥೆಗಳ(ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯ ವಸ್ತು ನಿಗಧೀಕರಣ ಇತ್ಯಾದಿ) ನಿಯಮಾವಳಿ 1995, ದಿನಾಂಕ:-04-10-96ರ ನಿಯಮ-10ರಂತೆ ಟರ್ಮ್ ಶುಲ್ಕ, ಬೋಧನಾ ಶುಲ್ಕ, ವಿಶೇಷ ಅಭಿವೃದ್ಧಿ ಶುಲ್ಕಗಳನ್ನು ಮಾತ್ರ

ವಸೂಲಿ ಮಾಡತಕ್ಕದ್ದು ಹಾಗೂ ನಿಯಮ 10(04)ರಂತೆ ಶಾಲೆಯಲ್ಲಿ ವಿದ್ಯಾರ್ಥಿ/ಪೋಷಕರಿಂದ ವಸೂಲಿ ಮಾಡುವ ಶುಲ್ಕಗಳ ವಿವರಗಳ ಒಂದು ಬ್ರೋಚರ್ ಅನ್ನು ಶಾಲೆಯ ಸೂಚನಾಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸಿ, ಅದರ ಒಂದು ಪ್ರತಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ/ಉಪನಿರ್ದೇಶಕರಿಗೆ ಸಲ್ಲಿಸತಕ್ಕದ್ದು.

11. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ.39. ವಿವಿಧ-99. ದಿನಾಂಕ:14-03-2000ರ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ರೆಗ್ಯುಲೇಷನ್ ಆಫ್ ಸರ್ಟನ್ ಫೀಸ್ ಅಂಡ್ ಡೊನೇಶನ್ಸ್) ನಿಯಮ-1999ರ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು ಹಾಗೂ ಈ ನಿಯಮದಂತೆ ಯಾವುದೇ ವಂತಿಗೆಯನ್ನು ವಸೂಲು ಮಾಡುವಂತಿಲ್ಲ.
12. ಅನುಮತಿ ಪಡೆದ 2 ತಿಂಗಳೊಳಗಾಗಿ ಕರ್ನಾಟಕ ಶಿಕ್ಷಣ ಕಾಯ್ದೆ 1983 (ಆಕ್ಟ್ 1 ಆಫ್ 1995) ಪ್ರಕಾರದ ಸೆಕ್ಷನ್ 36 ರಿಂದ 39 ರ ರೀತ್ಯಾ ಹಾಗೂ ಇಡಿ 131 ವಿವಿಧ 98, ಬೆಂಗಳೂರು, ದಿನಾಂಕ : 04-11-99 ರಂತೆ ಮಾನ್ಯತೆ ನವೀಕರಣ ಹೊಂದಲು ಸರ್ಕಾರಿ ಅಧಿಸೂಚನೆ ಸಂಖ್ಯೆ ಇಡಿ 137 ವಿವಿಧ 98, ಬೆಂಗಳೂರು, ದಿನಾಂಕ : 19-05-99 ರ ಪ್ರಕಾರದ ಸಕ್ಷಮ ಪ್ರಾಧಿಕಾರಿಗಳಿಗೆ ಅರ್ಜಿ ಸಲ್ಲಿಸತಕ್ಕದ್ದು ಹಾಗೂ ಶಾಲೆಯನ್ನು ಪ್ರಾರಂಭಿಸಲು ಸಂಸ್ಥೆಯವರು ನಿಗದಿತ ಭದ್ರತಾ ಠೇವಣಿಯನ್ನು ಜಿಲ್ಲಾ ಉಪ ನಿರ್ದೇಶಕರ ಹಾಗೂ ಆಡಳಿತ ಮಂಡಳಿಯ ಕಾರ್ಯದರ್ಶಿಗಳ ಜಂಟಿ ಖಾತೆಯಲ್ಲಿ ಇಡತಕ್ಕದ್ದು.
13. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ.52ವಿವಿಧ.99 ದಿನಾಂಕ:-02-02-2000ರ ಅನೆಕ್ಸರ್-5ರಲ್ಲಿ ನಿಯಮದಂತೆ ಅನುಮತಿ ನೀಡಿದ ಪ್ರತಿಯೊಂದು ತರಗತಿಯಲ್ಲಿ ಮಕ್ಕಳ ಹಾಗೂ ಶಿಕ್ಷಕರ ಅನುಪಾತವನ್ನು ಪಾಲಿಸತಕ್ಕದ್ದು.
14. ತರಬೇತಿ ಹೊಂದಿದ ಹಾಗೂ ಇಲಾಖೆಯ ನಿಯಮಗಳ ಪ್ರಕಾರ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಮಾತ್ರ ನೇಮಿಸತಕ್ಕದ್ದು.
15. ಕರ್ನಾಟಕ ಶಿಕ್ಷಣ ಮಸೂದೆಯ ನಿಯಮಗಳಂತೆ ಶಾಲೆಗೆ ಬೇಕಾದ ಪೀಠೋಪಕರಣ, [illegible]ಪಕರಣ, ಗ್ರಂಥಾಲಯ ಮುಂತಾದ ಸೌಲಭ್ಯಗಳನ್ನು ಒಂದು ವರ್ಷದಲ್ಲಿ, ಆಟದ ಮೈದಾನ ಶಾಲಾ ಕಟ್ಟಡಗಳನ್ನು ಮೂರು ವರ್ಷದಲ್ಲಿ ಒದಗಿಸಿಕೊಳ್ಳತಕ್ಕದ್ದು.
16. ಶಾಲಾ ಕೆಲಸದ ವೇಳೆ ಮತ್ತು ದಿನಗಳನ್ನು ಇಲಾಖೆಯ ನಿಯಮಗಳಂತೆ ಪಾಲಿಸತಕ್ಕದ್ದು.
17. ಶಾಲೆ ತೆರೆದ ಬಗ್ಗೆ ಹಾಗೂ ವಿದ್ಯಾರ್ಥಿಗಳ ದಾಖಲಾತಿಯನ್ನು ಶಾಲೆ ನೋಂದಣಿಯಾದ ಅಥವಾ ಶೈಕ್ಷಣಿಕ ವರ್ಷ ಪ್ರಾರಂಭವಾದ ಎರಡು ತಿಂಗಳ ಒಳಗಾಗಿ ಈ ಕಛೇರಿಗೆ ತಿಳಿಸಬೇಕು. ಒಂದು ವೇಳೆ ಶಾಲೆ ತೆರೆಯದಿದ್ದಲ್ಲಿ ಹಾಗೂ ಯಾವುದೇ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಈ ಆದೇಶ ತನ್ನಿಂದ ತಾನೇ ರದ್ದಾಗುವುದು.
18. 7 ಮತ್ತು 8 ನೇ ತರಗತಿಯನ್ನು ಸ್ವಾಭಾವಿಕ ಬೆಳವಣಿಗೆ ಆಧಾರದ ಮೇಲೆ ಪ್ರಾರಂಭಿಸತಕ್ಕದ್ದು.
19. ಈಗಾಗಲೇ 1 ರಿಂದ 7ನೇ ತರಗತಿ ಕನ್ನಡ ಮಾಧ್ಯಮ ಇದ್ದಲ್ಲಿ, ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯ ಮಂಜೂರಾತಿಯಿಂದ ಕನ್ನಡ ಮಾಧ್ಯಮದ ತರಗತಿಗಳಿಗೆ ಯಾವುದೇ ರೀತಿ ಧಕ್ಕೆ ಬಾರದಂತೆ ನೋಡಿಕೊಳ್ಳುವುದು.
20. ಸರ್ಕಾರದ ಸುತ್ತೋಲೆ ಸಂಖ್ಯೆ.ಇಡಿ 27 ಎಸ್‌ಇಪಿ 03 ದಿನಾಂಕ:-13-02-2003 ರ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಿ, ಶಾಲೆಯಲ್ಲಿ ನೇಮಕಗೊಂಡಿರುವ ಸಿಬ್ಬಂದಿಗಳ ಸೇವಾ ಪುಸ್ತಕವನ್ನು ತೆರೆದು, ಅದರಲ್ಲಿ ಶಿಕ್ಷಕರ ಸೇವಾ ವಿವರಗಳನ್ನು ನಿಯಮಾನುಸಾರ ದಾಖಲು ಮಾಡಿ ಕಡ್ಡಾಯವಾಗಿ ನಿರ್ವಹಿಸುವುದು.
21. ಶಿಕ್ಷಕರನ್ನು ಗಣತಿ ಕಾರ್ಯಕ್ಕೆ ತಪ್ಪದೇ ನಿಯೋಜಿಸುವುದು.
22. ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಯಾವುದೇ ದಾಖಲೆಗಳು ಸುಳ್ಳು ದಾಖಲೆಗಳೆಂದು ಕಂಡು ಬಂದಲ್ಲಿ ಈ ನೋಂದಣಿಯನ್ನು ರದ್ದುಪಡಿಸಲಾಗುವುದು.
23. ಪ್ರತಿ ತರಗತಿಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ. 50 ಕ್ಕೆ ಮೀರಬಾರದು.
24. ಅನುಮತಿ ನೀಡಿದ 5 ವರ್ಷಗಳವರೆಗೆ ಶಾಲಾ ಸ್ಥಳಾಂತರ ಮತ್ತು ಹಸ್ತಾಂತರಕ್ಕೆ ಅವಕಾಶವಿರುವುದಿಲ್ಲ.
25. ಸರ್ಕಾರದ ಪತ್ರದ ಸಂಖ್ಯೆ:ಇಡಿ:122:ಎಸ್.ಇ.ಎಸ್.2007 ಬೆಂಗಳೂರು ದಿನಾಂಕ:17.05.2007 ರ ಪತ್ರದಲ್ಲಿನ ಷರತ್ತುಗಳನ್ನು ಪೂರೈಸತಕ್ಕದ್ದು.
26. 1 ರಿಂದ 5 ನೇ ತರಗತಿವರೆಗೆ ಯಾವ ಮಾಧ್ಯಮದಲ್ಲಿ ನೋಂದಣಿ ನೀಡಲಾಗಿದೆಯೋ ಅದೇ ಮಾಧ್ಯಮದಲ್ಲಿ ಶಾಲೆಯನ್ನು ನಡೆಸತಕ್ಕದ್ದು.

ಸ್ಥಳ : ಬೆಂಗಳೂರು
ದಿನಾಂಕ : 03-05-2014

ಆಯುಕ್ತರು ಹಾಗೂ ನೋಂದಣಿ ಅಧಿಕಾರಿ,
ಸಾರ್ವಜನಿಕ ಶಿಕ್ಷಣ ಇಲಾಖೆ

ಪ್ರತಿಯನ್ನು,

1. ಉಪನಿರ್ದೇಶಕರು,(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ತುಮಕೂರು (ದ)ಜಿಲ್ಲೆ.
2. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ತಿಪಟೂರು ತಾಲ್ಲೂಕು.
3. ಕಾರ್ಯದರ್ಶಿಗಳು,ಶ್ರೀ ವಿದ್ಯಾಶಂಕರ ಎಜುಕೇಷನಲ್ ಅಂಡ್ ಚಾರಿಟಬಲ್ ಟ್ರಸ್ಟ್(ರಿ) ವಿದ್ಯಾನಗರ, ತಿಪಟೂರು, ತುಮಕೂರು ಜಿಲ್ಲೆ (ನೋಂದಣಿ ಸಂ.324, 10ನೇ ಮೈನ್, 4ನೇ ಬ್ಲಾಕ್, ನಂದಿನಿಲೇಔಟ್, ಬೆಂಗಳೂರು-96)
4. ಕಛೇರಿ ಪ್ರತಿ.

**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು - 560 001**

**ಮಂಜೂರಾತಿ ನೀಡಿದ ಕಛೇರಿ ವಿಳಾಸ:** ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ: ಸಿ೩(೮) ಶಾಶಿಇ.ಹೊಪ್ರೌಶಾ.ನೊಂ.ಅನು/116/2017-18 **ನಮೂನೆ-2** ದಿನಾಂಕ: 17/05/2017

**[ನಿಯಮ 3 ಉಪನಿಯಮ 5(ಬಿ)]**

**ಪ್ರಮಾಣ ಪತ್ರ ಸಂಖ್ಯೆ:** 36/2017-18

**ಶ್ರೀ ವಿದ್ಯಾ ಶಂಕರ್ ಎಜುಕೇಷನಲ್ ಅಂಡ್ ಚಾರಿಟಬಲ್ ಟ್ರಸ್ಟ್,,# 324, ಶ್ರೀರಂಗ ನಿಲಯ, 10ನೇ ಮುಖ್ಯ ರಸ್ತೆ, 4ನೇ ಬ್ಲಾಕ್, ನಂದಿನಿ ಬಡಾವಣೆ, ಬೆಂಗಳೂರು - 96.**

ಇವರ ಗೌವರ್ನಿಂಗ್ ಕೌನ್ಸಿಲ್ನ ಈ ಶಿಕ್ಷಣ ಸಂಸ್ಥೆಯ ಹೊಸ ಪ್ರೌಢಶಾಲೆಯನ್ನು ಕರ್ನಾಟಕ ಶಿಕ್ಷಣ ಕಾಯ್ದೆ 1983 [ಕರ್ನಾಟಕ ಆಕ್ಟ್ 1995] ಸೆಕ್ಷನ್ 31ರಂತೆ ಈ ಕೆಳಕಂಡ ಪ್ರೌಢಶಾಲೆ ಪ್ರಾರಂಭಿಸಲು ಮಂಜೂರಾತಿ ನೀಡಿ ನೊಂದಾಯಿಸಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ.

1. ಅರ್ಜಿ ಸಂಖ್ಯೆ : **294841**
2. ಕ್ರಮ ಸಂಖ್ಯೆ : 36
3. ಶಾಲೆಯ ಹೆಸರು ಮತ್ತು ವಿಳಾಸ : **ದೀಕ್ಷ ಹೆರಿಟೇಜ್ ಆಂಗ್ಲ ಪ್ರೌಢಶಾಲೆ**
   **ಚಿನ್ಮಯ ಕೃಷ್ಣ ಮಂದಿರ ಹತ್ತಿರ, ವಿದ್ಯಾ ನಗರ, ತಿಪಟೂರು, ತುಮಕೂರು ಜಿಲ್ಲೆ.**
4. ಅನುಮತಿ ನೀಡಿದ ತರಗತಿ : **9 ರಿಂದ 10ನೇ ತರಗತಿ**
5. ಶೈಕ್ಷಣಿಕ ವರ್ಷ : **2017-18**
6. ಅನುಮತಿ ನೀಡಿದ ಮಾಧ್ಯಮ : **ಇಂಗ್ಲೀಷ್**

ಸದರಿ ಶಿಕ್ಷಣ ಸಂಸ್ಥೆಯನ್ನು ಈ ಕಛೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ ನೋಂದಣಿ ವಹಿಯಲ್ಲಿ ನೊಂದಾಯಿಸಲಾಗಿದೆ.

ಕ್ರಮ ಸಂಖ್ಯೆ / ಪುಟ ಸಂಖ್ಯೆ/ ವಾಲ್ಯೂಂ ಸಂಖ್ಯೆ : 36 / 250 / 09

**<u>ಷರತ್ತುಗಳು</u>**

1. ಈ ನೋಂದಾವಣಿಯ ನಿಯಮ 3[5][4]ಕ್ಕೆ ಒಳಪಟ್ಟಿರುತ್ತದೆ.
2. ಗೌವರ್ನಿಂಗ್ ಕೌನ್ಸಿಲ್ ಇವರು ನಿಯಮ 4[4]ರಲ್ಲಿ ತಿಳಿಸಿರುವ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕು.
3. ಶಾಲಾ ನಿವೇಶನ, ವಿಸ್ತೀರ್ಣ, ಕಟ್ಟಡ, ಪೀಠೋಪಕರಣಗಳು, ಸಿಬ್ಬಂದಿ ವರ್ಗ ಆರ್ಥಿಕ ಅನುಕೂಲತೆಗಳು ಮುಂತಾದವುಗಳನ್ನು ಒದಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ. ಸದರಿ ಶಿಕ್ಷಣ ಸಂಸ್ಥೆಯು ಯಾವುದೇ ಸಂದರ್ಭದಲ್ಲಿಯೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.
4. ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ಮಾತ್ರ ತೆರೆಯತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ. ಯಾವ ಆಡಳಿತ ಮಂಡಳಿಗೆ ಶಾಲೆ ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಮಂಡಳಿಯು ಅದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿ ನಡೆಸತಕ್ಕದ್ದು.
5. ಈ ಶಿಕ್ಷಣ ಸಂಸ್ಥೆಯವರು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ, ಜಾರಿಯಲ್ಲಿರುವ ಹಾಗೂ ಆಗಿಂದಾಗ್ಗೆ ಹೊರಡಿಸುವ ಎಲ್ಲಾ ಸರ್ಕಾರಿ ಆದೇಶಗಳು ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು. ಕರ್ನಾಟಕ ಶಿಕ್ಷಣ ಮಸೂದೆ 1983 [ಕರ್ನಾಟಕ ಆಕ್ಟ್ ಸಂಖ್ಯೆ:1:96] ಇದರಡಿಯಲ್ಲಿ ಬರುವ ಕಾಯ್ದೆಗಳನ್ನು ಮತ್ತು ಅದರಡಿಯಲ್ಲಿ ರಚಿಸಲಾಗಿರುವ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.
6. ಈ ಪ್ರೌಢಶಾಲಾ ನೊಂದಾವಣಿಯಂತೆ ಸರ್ಕಾರಿ ಅಧಿಸೂಚನೆ ಸಂ:ಇಡಿ:175:ಪಿಎಂಸಿ:95, ದಿ:07-09-1998 ಮತ್ತು ದಿ:29-12-1998ರ ಪ್ರಕಾರ ಶಾಶ್ವತ ಅನುದಾನ ರಹಿತವಾಗಿರುತ್ತದೆ. ಆಡಳಿತ ಮಂಡಳಿಯು ಸರ್ಕಾರದಿಂದ ಯಾವುದೇ ಅನುದಾನವನ್ನು ಬಯಸುವುದಿಲ್ಲವೆಂದು ರೂ. 10-00 ಛಾಪಾ ಕಾಗದಲ್ಲಿ ನೋಟರಿಯವರ ಮುಂದೆ ಪ್ರಮಾಣೀಕರಿಸಿದ ಒಪ್ಪಿಗೆ ಪತ್ರವನ್ನು ನೀಡುವುದು.

**ಮುಂದುವರೆದಿದೆ......**

7. ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳು [ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ, ಸೇವಾ ಷರತ್ತು ಮತ್ತು ನಿಬಂಧನೆಗಳು] ನಿಯಮ 1999ರ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.
8. ಇಲಾಖೆ ಹಾಗೂ ಸರ್ಕಾರ ನಿಗಧಿಪಡಿಸಿದ ಪಠ್ಯಪುಸ್ತಕ, ಪರೀಕ್ಷಾ ಕ್ರಮಗಳನ್ನು ಮಾತ್ರ ತಪ್ಪದೇ ಅಳವಡಿಸತಕ್ಕದ್ದು.
9. ಅನುಮತಿ ನೀಡಿದ ಪ್ರತಿಯೊಂದು ತರಗತಿಯಲ್ಲಿ ಕನಿಷ್ಠ ಹಾಜರಾತಿ 25 ಇರತಕ್ಕದ್ದು.
10. ಶಾಲೆಯ ಎಸ್‌ಎಸ್‌ಎಲ್ ಸಿ ಫಲಿತಾಂಶ ಪ್ರತೀ ವರ್ಷ ಜಿಲ್ಲಾ ಸರಾಸರಿಗಿಂತ ಹೆಚ್ಚಿಗೆ ಇರುವಂತೆ ಕ್ರಮ ವಹಿಸತಕ್ಕದ್ದು.
11. ತರಬೇತಿ ಹೊಂದಿದ ಹಾಗೂ ಇಲಾಖೆಯ ನಿಯಮಗಳ ಪ್ರಕಾರ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಮಾತ್ರ ನೇಮಿಸತಕ್ಕದ್ದು. ಕರ್ನಾಟಕ ಶಿಕ್ಷಣ ಮಸೂದೆ ಅನುಚ್ಛೇದ 8ರ ಅಡಿಯಲ್ಲಿ ಉಪಬಂಧ 36-39ರಂತೆ ನೊಂದಾಯಿಸಿದ ಎಲ್ಲಾ ಶಾಲೆಗಳ ಮಾನ್ಯತೆ ಹಾಗೂ ತಾತ್ಕಾಲಿಕ ಮಾನ್ಯತೆ ವ್ಯಾಪ್ತಿಗೆ ಬರುವುದು.
12. ಪ್ರತಿ ವರ್ಷವು ವಿದ್ಯಾರ್ಥಿಗಳ ವೈದ್ಯಕೀಯ ಪರೀಕ್ಷೆಯನ್ನು ನಿಯಮಾನುಸಾರ ಮಾಡಿಸತಕ್ಕದ್ದು.
13. ಶಾಲೆಯನ್ನು ಪ್ರಾರಂಭಿಸಲು ಸಂಸ್ಥೆಯವರು ಭದ್ರತಾ ಠೇವಣಿಯನ್ನು ಜಿಲ್ಲಾ ಉಪನಿರ್ದೇಶಕರು ಹಾಗೂ ಆಡಳಿತ ಮಂಡಳಿಯ ಜಂಟಿ ಖಾತೆಯಲ್ಲಿ ಇರಿಸತಕ್ಕದ್ದು.
14. ಕರ್ನಾಟಕ ಶಿಕ್ಷಣ ಮಸೂದೆ ನಿಯಮಗಳ ಪ್ರಕಾರ ಶಾಲೆಗೆ ಬೇಕಾದ ಪೀಠೋಪಕರಣ, ಪಾಠೋಪಕರಣ, ಗ್ರಂಥಾಲಯ ಪುಸ್ತಕಗಳು, ಆಟದ ಮೈದಾನ, ಶಾಲಾ ಕಟ್ಟಡ ಮುಂತಾದ ಸೌಲಭ್ಯಗಳನ್ನು ಒಂದು ವರ್ಷದಲ್ಲಿ ಒದಗಿಸಿಕೊಳ್ಳತಕ್ಕದ್ದು, ಇಲ್ಲದಿದ್ದಲ್ಲಿ ನೋಂದಣಿಯನ್ನು ರದ್ದುಗೊಳಿಸಲಾಗುವುದು.
15. ಶಾಲೆ ತೆರೆದ ಬಗ್ಗೆ ಹಾಗೂ ವಿದ್ಯಾರ್ಥಿಗಳ ದಾಖಲಾತಿಯನ್ನು ಶಾಲೆ ನೋಂದಣಿಯಾದ ಅಥವಾ ಶೈಕ್ಷಣಿಕ ವರ್ಷ ಪ್ರಾರಂಭದ ಮೂರು ತಿಂಗಳ ಒಳಗಾಗಿ ಈ ಕಛೇರಿಗೆ ತಿಳಿಸಬೇಕು. ಒಂದು ವೇಳೆ ಶಾಲೆ ತೆರೆಯದಿದ್ದಲ್ಲಿ ಹಾಗೂ ಯಾವುದೇ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಈ ಆದೇಶ ತಾನಾಗೇ ರದ್ದಾಗುವುದು.
16. ಶಾಲೆಯಲ್ಲಿ ಹೆಣ್ಣು ಮಕ್ಕಳಿಗೆ ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕವಾದ ಶೌಚಾಲಯದ ವ್ಯವಸ್ಥೆಯನ್ನು ಕಡ್ಡಾಯವಾಗಿ ಒದಗಿಸಬೇಕು ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಒದಗಿಸಬೇಕು.
17. ಪ್ರಥಮ ಮಾನ್ಯತೆಗಾಗಿ ಉಪನಿರ್ದೇಶಕರಿಗೆ ಪ್ರಸ್ತಾವನೆ ಸಲ್ಲಿಸುವುದು, ಉಪನಿರ್ದೇಶಕರು ಶಿಕ್ಷಣ ಕಾಯ್ದೆ ಮತ್ತು ಸರ್ಕಾರದ ಆದೇಶ ದಿನಾಂಕ:30-09-2007ರ ಅನುಬಂಧ -3ರ ಚೆಕ್ಲಿಸ್ಟಲ್ಲಿ ಮಾಹಿತಿ ಪಡೆದು ಈ ಆಧಾರದ ಮೇಲೆ ಶಾಲೆ ಪ್ರಾರಂಭಿಸಿದ ಮೂರು ತಿಂಗಳೊಳಗೆ ಕಡ್ಡಾಯವಾಗಿ ಪ್ರಥಮ ಮಾನ್ಯತೆ ನೀಡುವುದು, ನಿಗದಿತ ಅವಧಿಯೊಳಗೆ ಮಾನ್ಯತೆ ಪಡೆಯದಿದ್ದಲ್ಲಿ ನೋಂದಣಿ ತಂತಾನೆ ರದ್ದಾಗುತ್ತದೆ.
18. ಶಾಲೆಯ ಕಟ್ಟಡ ಸುರಕ್ಷತೆಯ ಬಗ್ಗೆ ಬೆಂಕಿ ಬಿರುಗಾಳಿ ವಿದ್ಯುತ್ ಅಪಘಾತ ಮುಂತಾದ ಅವಘಡಗಳಿಂದ ಸುರಕ್ಷಿತವಾಗಿರುವ ಬಗ್ಗೆ ಪರಿಶೀಲಿಸಿ ಖಚಿತಪಡಿಸಿಕೊಳ್ಳುವುದು. ಶಾಲಾ ಆವರಣದ 100 ಗಜಗಳ ಅಂತರದಲ್ಲಿ ತಂಬಾಕು ಉತ್ಪನ್ನಗಳ ಮಾರಾಟವನ್ನು ನಿಷೇದಿಸಿದೆ ಎಂದು ಶಾಲಾ ಮುಂಭಾಗದಲ್ಲಿ ಪ್ರಕಟಣೆ ನೀಡುವುದು.
19. ಶಾಲಾ ಆಡಳಿತ ಮಂಡಳಿ ಯಾವುದೇ ತಪ್ಪು ಮಾಹಿತಿಗಳನ್ನು ನೀಡಿದ್ದಲ್ಲಿ, ನೋಂದಣಿಯನ್ನು ರದ್ದುಪಡಿಸುವ ಅಧಿಕಾರ ಇಲಾಖೆ ಕಾಯ್ದಿರಿಸಿಕೊಂಡಿದೆ.
20. ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 369 ಪಿ.ಜಿ.ಸಿ 2014, ದಿನಾಂಕ: 11.11.2014ರಂತೆ ಮತ್ತು ಈ ಕಛೇರಿ ಸುತ್ತೋಲೆ ದಿನಾಂಕ: 14.11.2014 ರಂತೆ ಷರತ್ತುಗಳನ್ನು ಪಾಲಿಸಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

**[ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ ]**

**(ಫಿಲೋಮಿನಾ ಲೋಬೋ)**
**ನಿರ್ದೇಶಕರು (ಪ್ರೌಢ ಶಿಕ್ಷಣ)**
**ಆಯುಕ್ತರು ಹಾಗೂ ನೋಂದಾಣಾಧಿಕಾರಿಗಳ ಪರವಾಗಿ)**

**ಗೆ:**

1. ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ: ತುಮಕೂರು
2. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ : ತಿಪಟೂರು
3. ಕಾರ್ಯದರ್ಶಿಗಳು, **ಶ್ರೀ ವಿದ್ಯಾ ಶಂಕರ್ ಎಜುಕೇಷನಲ್ ಅಂಡ್ ಚಾರಿಟಬಲ್ ಟ್ರಸ್ಟ್,,# 324, ಶ್ರೀರಂಗ ನಿಲಯ, 10ನೇ ಮುಖ್ಯ ರಸ್ತೆ, 4ನೇ ಬ್ಲಾಕ್, ನಂದಿನಿ ಬಡಾವಣೆ, ಬೆಂಗಳೂರು - 96.**
4. ಕಛೇರಿ ಪ್ರತಿ:.